## ಮುಂದಕ್ಕೆ...

ಇಬ್ಬರು ವ್ಯಕ್ತಿಗಳು ರೈಲಿನಲ್ಲಿ ಸಂಭಾಷಣೆ ನಡೆಸುತ್ತಿದ್ದರು. ಒಬ್ಬ ಹೇಳಿದ 'ವಾಟ್ಸ್‌ಆ್ಯಪ್ ಫೇಸ್‌ಬುಕ್ ಓದುವ ಮನುಷ್ಯ ಜೀವನದಲ್ಲಿ ಮುಂದೆ ಬರುತ್ತಾನೆ' ಎಂದು. ಇನ್ನೊಬ್ಬ ಕೇಳಿದ, 'ಅದು ಹೇಗೆ?' ಆತ ಹೇಳಿದ, 'ಈಗ ನನ್ನನ್ನೇ ನೋಡಿ, ಎರಡು ನಿಲ್ದಾಣಗಳ ಹಿಂದೆಯೇ ಇಳಿಯಬೇಕಿತ್ತು. ವಾಟ್ಸ್‌ಆ್ಯಪ್‌ನಲ್ಲಿ ಬಂದ ಮೆಸೇಜ್ ಓದುತ್ತ ಕುಳಿತಿದ್ದೆ, ಸ್ಟೇಶನ್ ದಾಟಿ ಹೋಗಿದ್ದೇ ಗೊತ್ತಾಗಲಿಲ್ಲ. ಎರಡು ನಿಲ್ದಾಣ ದಾಟಿದ ಮೇಲೆ ನೋಡಿದೆ!'

**ಶೋಭಾ ಪ್ರಮೋದ್**





## ಗೃಹಪ್ರವೇಶ

ಗುಂಡ ಕೇಳಿದ 'ನಮ್ಮ ಮನೆ ಗೃಹಪ್ರವೇಶಕ್ಕೆ ಏಕೆ ಬರಲಿಲ್ಲ ಶೇಟ್‌ಜೀ?'

ಶೇಟು, 'ನಾನು ಬರಬೇಕೂಂತಾನೇ ಇದ್ದೆ ಗುಂಡ, ಆದ್ರೆ ನೀನು ಆಮಂತ್ರಣ ಪತ್ರಿಕೆಯಲ್ಲಿ ಯಾವ ಕಲ್ಯಾಣ ಮಂಟಪದಲ್ಲಿ ಗೃಹಪ್ರವೇಶ ಇಟ್ಕೊಂಡಿದ್ದೀರಿ ಅಂತ ಹಾಕಿರಲೇ ಇಲ್ಲ' ಎಂದಾಗ ಗುಂಡ ಬೆಪ್ಪಾಗಿ ನಿಂತ.

**ಶಶಿರೇಖಾ ನಾಗೇಂದ್ರ**

ಚಿತ್ರಗಳು: ಗಣೇಶ ಆಚಾರ್ಯ